Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 4-12-2022

**ಪತ್ರಿಕಾ ಪ್ರಕಟಣೆ:**

# ಕರ್ನಾಟಕ ಸರ್ಕಾರದ ಕೆ ಟೆಕ್ ನೈನ್ ಸೆಂಟರ್ ಉದ್ಘಾಟನೆ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳಕ್ಕೆ ವೋಲ್ವೋ ಗ್ರೂಪ್ ಇಂಡಿಯಾದ ಸಿ. ಎಸ್. ಆರ್. ವಿಭಾಗದ ನಿರ್ದೇಶಕರಾದ ಶ್ರೀ. ಜಿ. ವಿ. ರಾವ್ ಅವರು ಮಹಾವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಸರ್ಕಾರದ ಕೆ–ಟೆಕ್ ನೈನ್ ಸೆಂಟರ್ ಉದ್ಘಾಟಿಸಿ ಉಪನ್ಯಾಸ ನೀಡಿದರು.ವೋಲ್ವೋ ಕಂಪನಿಯು ಉತ್ಪಾದಿಸುತ್ತಿರುವ ವಿವಿಧ ವಾಹನಗಳ ಕಿರುಪರಿಚಯಿಸುತ್ತ, ಮಾರುಕಟ್ಟೆಯಲ್ಲಿ ವೋಲ್ವೋ ವಾಹನದ ವಹಿವಾಟಿನ ಮಾಹಿತಿ ನೀಡಿದರು. ಭವಿಷ್ಯದಲ್ಲಿ ಎಲೆಕ್ಟ್ರಿಕಲ್ ವಾಹನದ ಉತ್ಪಾದನೆಯನ್ನು ವೋಲ್ವೋ ಹೆಚ್ಚಿಸಲಿದೆ, ಅಷ್ಟೇ ಅಲ್ಲದೆ ವಾತಾವರಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತಹ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಿದೆ ಎಂದು ಹೇಳಿದರು.ವೋಲ್ವೋ ಕಂಪನಿಯು ವಾಹನದಲ್ಲಿ ಅಳವಡಿಸುತ್ತಿರುವ ಅತ್ಯಾಧುನಿಕ ಸುರಕ್ಷತಾ ಕ್ರಮಗಳ ಕುರಿತು ವಿವರಿಸಿದರು.ವಿದ್ಯಾರ್ಥಿಗಳಿಗೆ ಆಟೋಮೋಬೈಲ್ ಕುರಿತಾಗಿ ಜ್ಞಾನ ಹೆಚ್ಚಿಸಲು ಪ್ರಾಚಾರ್ಯರದ ಡಾ. ವಿ. ಎ. ಕುಲಕರ್ಣಿ ಅವರು ಶ್ರೀ. ಜಿ. ವಿ. ರಾವ್ ಅವರು ಮಹಾವಿದ್ಯಾಲಯಕ್ಕೆ ಆಗಮಿಸಿರುವುದು ತುಂಬಾ ಹರ್ಷ ತಂದಿದೆ ಎಂದರು. ವಿದ್ಯಾರ್ಥಿಗಳಿಗೆ ವಾಹನದ ಇಂಜಿನ್ ಕುರಿತಾಗಿ ಜ್ಞಾನ ಹೊಂದುವ ಸಲುವಾಗಿ ವೋಲ್ವೋ ಕಂಪನಿಯು ಬಸ್ಸಿನ ಇಂಜಿನ್ ಅನ್ನು ಕೊಡುಗೆಯಾಗಿ ನೀಡಿರುವ ವೋಲ್ವೋ ಕಂಪನಿಗೆ ಮಹಾವಿದ್ಯಾಲಯವು ಆಭಾರಿಯಾಗಿದೆ ಎಂದು ಹೇಳಿದರು.

ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಪ್ರೊ. ಎಸ್. ಡಿ. ಕುಲಕರ್ಣಿ ಅವರು ಸ್ವಾಗತಿಸಿದರು. ಟ್ರೇನಿಂಗ್ ಮತ್ತು ಪ್ಲೇಸ್ಮೆಂಟ್ ನ ಸಂಚಾಲಕರಾದ ಪ್ರೊ. ರಜತ್ ಆಚಾರ್ಯ ವಂದಿಸಿದರು.ಪ್ರೊ. ರೋಹಿಣಿ ಕಲ್ಲೂರ್ ಮತ್ತು ಪ್ರೊ.ಲಕ್ಷ್ಮಿ ಹಟ್ಟಿ ಹೋಳಿ ನಿರೂಪಿಸಿದರು. ಮಹಾವಿದ್ಯಾಲಯದ 100ಕ್ಕೂ ಅಧಿಕ ಬೋಧಕ ಸಿಬ್ಬಂದಿಗಳು ಈ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**


KTech Innovation Hub
NEW AGE INNOVATION NETWORK
WORK SPACE
K-tech
INNOVATION HUB
STARTUP
KARNATAKA
NEW AGE INNOVATION NETWORK
KLS VDIT
Transforming Through Technology
K-Tech Innovation Hub
NAIN (New Age Incubation Network) Cent
KITS-Karnataka Innovation & Technology So
Dept. of Electronics, IT, BT and S&T
Government of